ಈಗ ಒಂದು ಕೆಲಸ ಮಾಡೋಣ. ಸದನವನ್ನು ಈಗ ಹದಿನೈದು ನಿಮಿಷಗಳ ಕಾಲ ಅಡ್ಜರ್ನ್ ಮಾಡುತ್ತೇನೆ. ನಾಯಕರುಗಳೆಲ್ಲರೂ ಬನ್ನಿ, ಮಾತನಾಡೋಣ.

ಈಗ ಸದನವನ್ನು ಹದಿನೈದು ನಿಮಿಷಗಳ ಕಾಲ ಮುಂದಕ್ಕೆ ಹಾಕುತ್ತಿದ್ದೇನೆ.

(ಸದನವನ್ನು 11 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟು,
ಪುನಃ ಹದಿನೈದು ನಿಮಿಷಗಳ ನಂತರ ಸೇರಲು ನಿಶ್ಚಯಿಸಲಾಯಿತು)

(ಸದನವು ಮತ್ತೆ 12 ಗಂಟೆಗೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು ಪೀಠವನ್ನಲಂಕರಿಸಿದರು)

(ಸದನದ ಬಾವಿಯಲ್ಲಿ ಬಿ.ಜೆ.ಪಿ. ಸದಸ್ಯರುಗಳು ಧರಣಿ ನಿರತರಾಗಿದ್ದರು)

ಅಧ್ಯಕ್ಷರು : ಈಗ ನಮ್ಮ ಕಛೇರಿಯಲ್ಲಿ ನಾನು ಎಲ್ಲಾ ಪಕ್ಷಗಳ ನಾಯಕರೊಡನೆ ಚರ್ಚೆ ಮಾಡಿದ ಮೇಲೆ. ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಲಾಗಿದೆ. ಮಾನ್ಯ ಮಂತ್ರಿಗಳ ಉತ್ತರದ ಅವಧಿಯೂ ಸೇರಿದಂತೆ ಒಟ್ಟಾರೆ ಒಂದು ಗಂಟೆಯ ಕಾಲಾವಧಿಯೊಳಗೆ ಚರ್ಚೆ ಮುಗಿಸುವುದಕ್ಕೆ ತೀರ್ಮಾನ ಆಗಿದೆ. ಆದುದರಿಂದ ಧರಣಿನಿರತರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

(ಧರಣಿನಿರತ ಬಿ.ಜೆ.ಪಿ. ಸದಸ್ಯರು ಅಧ್ಯಕ್ಷರ ಸೂಚನೆಯಂತೆ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರು)

2. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ದಿನಾಂಕ 15-8-2002ರಂದು ಸ್ವಾತಂತ್ರ ದಿನಾಚರಣೆಯನ್ನು ಆಚರಿಸುವ ವಿಚಾರದಲ್ಲಿ ಸರ್ಕಾರದವರು ಹೊರಡಿಸಿರುವ 'ಜ್ಞಾಪನಾ ಪತ್ರ'ವನ್ನು ಹಿಂತೆಗೆದುಕೊಳ್ಳುವ ಬಗ್ಗೆ.

+**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ನಾವೇನು ಈ ಒಂದು ಪ್ರಮುಖವಾದಂತಹ ವಿಚಾರದ ಬಗ್ಗೆ ಚರ್ಚಿಸಲು ಅವಕಾಶ ಕೋರಿ ನಿಲುವಳಿ ಸೂಚನೆಯನ್ನು ತಮಗೆ ಕೊಟ್ಟಿದ್ದೆವು ಆ ನಿಲುವಳಿ ಸೂಚನೆಯನ್ನು ತಾವು ರೂಲ್ 69 ಆಗಿ ಕನ್‌ವರ್ಟ್ ಮಾಡಿ ಅದರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ.

ನಾನು ತಮಗೆ ಮೊಟ್ಟಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈಗಾಗಲೇ ಪ್ರಸ್ತಾಪ ಮಾಡಿದ ಪ್ರಕಾರ ಈ ಜ್ಞಾಪನಾ ಪತ್ರ ಏನಿದೆ, ಅದರಲ್ಲಿ ಕಂಟೆಂಟ್ಸ್ ಏನಿದೆ ಎನ್ನುವುದನ್ನು ನಾನು ಓದಿದ್ದೇನೆ. ಈ ಒಂದು ರಾಜ್ಯದ ಗುಪ್ತವಾರ್ತಾ ಇಲಾಖೆ, ಬಹುಶಃ ಇದು ಮಾನ್ಯ ಮುಖ್ಯಮಂತ್ರಿಗಳ ಕೈಕೆಳಗೆ ಕೆಲಸ ಮಾಡುವಂತಹ ಇಲಾಖೆ; ಮತ್ತು ಇದು ನನ್ನ ಮಾಹಿತಿ ಪ್ರಕಾರ, ಅದಕ್ಕೆ ಹೋಮ್ ಮಿನಿಸ್ಟರ್‌ರವರ ಜವಾಬ್ದಾರಿ ಕೂಡ ಇರುತ್ತದೆ. ಮುಖ್ಯವಾಗಿ ಈ ಗೃಹ ಇಲಾಖೆಯನ್ನು ನಿರ್ವಹಣೆ ಮಾಡುವವರು ಈ ಗುಪ್ತವಾರ್ತಾ ಇಲಾಖೆಯೊಂದಿಗೆ ಸಂಬಂಧ ಇಟ್ಟುಕೊಂಡು ಮಾನ್ಯ ಗೃಹ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಾರದೇ ಇಂತಹ ಒಂದು ಜ್ಞಾಪನಾ ಪತ್ರವಾಗಲೀ, ಇಂತಹ ಮಹತ್ವದ ನೋಟಿಫಿಕೇಷನ್ ಆಗಲಿ ಬಹುಶಃ ಹೋಗಲಿಕ್ಕಿಲ್ಲ ಎಂಬುದು ನನ್ನ ಭಾವನೆ. ಇದೆಲ್ಲಾ ಪ್ರಮುಖವಾದುದು. ಯಾರು ಎಸ್‌ಪಿಗೆ, ಪೋಲೀಸ್ ಕಮೀಷನರ್‌ಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ